ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):–

ಅ) 15.

ಆ) ಉದ್ಯೋಗ ಸೃಜನೆ, ಕುಡಿಯುವ ನೀರು ಪೂರೈಕೆ, ಮೇವು ಪೂರೈಕೆ, ಉಚಿತ ಕೃಷಿ ಬೀಜ ವಿತರಣೆ, ಪೌಷ್ಟಿಕ ಆಹಾರ ಪೂರೈಕೆ ಕಾರ್ಯಕ್ರಮಗಳನ್ನು ಕೈಗೊಂಡಿದೆ.

ಇ) ಮೇಲಿನಂತೆ.

ಗುಲ್ಬರ್ಗ ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ರೈತರ ಬೆಳೆಗೆ ಹಾನಿ ಆದ ಬಗ್ಗೆ

537. ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಅಫ್‌ಜಲಪುರ) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಸತತವಾಗಿ ಬಿದ್ದ ಭಾರಿ ಮಳೆಯಿಂದ ರೈತರ ಬೆಳೆ ಎಲ್ಲಾ ನಾಶವಾಗಿರುವುದು ಹಾಗೂ ರೈತರು ಕಂಗಾಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಇದರ ಪರಿಹಾರಕ್ಕಾಗಿ ತುರ್ತು ಕಾರ್ಯಕ್ರಮ ಹಾಗೂ ಶಾಶ್ವತ ಕಾರ್ಯಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :–

ಅ) ಬೆಳೆ ನಾಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) (1) ಬೆಳೆ ಹಾನಿ ಉಂಟಾಗಿ ಪರ್ಯಾಯ ಬೆಳೆ ಬೆಳೆಯಲು ಅನುವಾಗುವಂತೆ ಉಚಿತ ಕೃಷಿ ಬೀಜ ವಿತರಣಾ ಕಾರ್ಯಕ್ರಮಕ್ಕಾಗಿ ರೂ. 3.00 ಲಕ್ಷಗಳನ್ನು ಜಿಲ್ಲಾಧಿಕಾರಿ, ಗುಲ್ಬರ್ಗಾ ಇವರಿಗೆ ಬಿಡುಗಡೆ ಮಾಡಿದೆ.

(2) ಹಾನಿಗೊಳಗಾದ ಕೆರೆ, ಕಾಲುವೆ ಇತ್ಯಾದಿಗಳ ದುರಸ್ತಿ ಕಾರ್ಯಕ್ರಮಗಳನ್ನು ಕೈಗೊಂಡಿದೆ.

ಕೋಲಾರ ಜಿಲ್ಲೆಯಲ್ಲಿ ಕ್ಷಾಮ ಪರಿಹಾರದ ಕಾರ್ಯಕ್ರಮಗಳಿಗೆ ಸರ್ಕಾರದವರು ಖರ್ಚು ಮಾಡಿದ ಹಣದ ಬಗ್ಗೆ

88. ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯಲ್ಲಿ ಇತ್ತೀಚೆಗೆ ಕ್ಷಾಮ ಪರಿಹಾರದ ಕಾರ್ಯಕ್ರಮಗಳ ಬಗ್ಗೆ ಸರ್ಕಾರದವರು ಖರ್ಚು ಮಾಡಿದ ಹಣದ ಒಟ್ಟು ಮೊತ್ತವೆಷ್ಟು?

ಆ) ವರ್ಷ ವರ್ಷ ಕ್ಷಾಮ ಪರಿಸ್ಥಿತಿ ಅನೇಕ ವರ್ಷಗಳಿಂದ ನಡೆದು ಬಂದಿರುವ ಪ್ರಯುಕ್ತ ಖಾಯಂ ಪರಿಹಾರವನ್ನು ಕೈಗೊಳ್ಳಲು ಸರ್ಕಾರದವರು ಯೋಜನೆಯೊಂದನ್ನು ಆಳವಡಿಸಿದ್ದಾರೆಯೇ :

ಇ) ಹಾಗಿದ್ದಲ್ಲಿ, ಅದರ ವಿವರಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):–

ಅ) ಕೋಲಾರ ಜಿಲ್ಲೆಯಲ್ಲಿ ಕ್ಷಾಮ ಇರುವ ಬಗ್ಗೆ ವರದಿಯಾಗಿಲ್ಲ. ಆದರೆ ಬರಪರಿಹಾರ ಕಾಮಗಾರಿಗಳಿಗಾಗಿ ರೂ. 38.657 ಲಕ್ಷಗಳನ್ನು ಖರ್ಚು ಮಾಡಿದೆ.

ಆ) ಸದ್ಯಕ್ಕೆ ಇಲ್ಲ.

ಇ) ಮೇಲೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.